ದಿನಾಂಕ: 09-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ ಅರ್ಜಿದಾರರ** ಪರ ಶ್ರೀ ಶ್ರೀನಿವಾಸ್ ಬಡಿ ವಕೀಲರಿಂದ

ಅರ್ಜಿದಾರರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿವೆ ಎಂದು ನುಡಿದಿದ್ದಾರೆ.

ಗಾಯದ ಪ್ರಮಾಣ ಪತ್ರವನ್ನು ನಿ ಪಿ 20 ಎಂದು, ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಿ ಪಿ 21 ಎಂದು, ಡಿಸ್ ಚಾರ್ಜ ಸಮರಿಯನ್ನು ನಿ ಪಿ 22 ಎಂದು, 10 ಮೆಡಿಕಲ್ ಬಿಲ್ಲುಗಳನ್ನು ನಿ ಪಿ 23 ಎಂದು, 07 ವೈದ್ಯಕೀಯ ಸಲಹಾ ಚೀಟಿಗಳನ್ನು ನಿ ಪಿ 24 ಎಂದು, 07 ಎಕ್ಸರೇಗಳನ್ನು ಹಾಜರುಪಡಿಸಿದ್ದು ನಿ ಪಿ 25 ರಿಂದ 31 ಎಂದು ಗುರುತಿಸಲಾಯಿತು.

**ಪಾಟೀಸವಾಲು: ಎದುರುದಾರ ಪರ ಶ್ರೀ ರಾಮಚಾರಜೋಷಿ ವಕೀಲರಿಂದ:-**

1. ಅಪಘಾತವಾದ ದಿನ ಮಸ್ಕಿಯಿಂದ ಸಿಂಧನೂರಿಗೆ ಹೊರಟಿದ್ದೇವು. ನಾನು ಮತ್ತು ಸಿದ್ದಮ್ಮ ಬೈಕ್ ಮೇಲೆ ಹೊರಟಿದ್ದೇವೆ. ಸಿದ್ದಮ್ಮ ಬೈಕ್ ನ ಹಿಂಬದಿಯ ಸವಾರಳಾಗಿದ್ದು, ಬೈಕ್ ನಾನೇ ನಡೆಸುತ್ತಿದ್ದನು. ಮಸ್ಕಿಯಿಂದ ಸಿಂಧನೂರು ಮುಖ್ಯ ರಸ್ತೆ ಎಂದರೆ ಸರಿ. ಅಪಘಾತ ನಡೆಯಿತು ಸ್ಥಳದಲ್ಲಿ ಎಸ್ ಟಿ ಎಮ್ ಟಿ ಕಾಲೇಜು ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ರಸ್ತೆ ತಡೆಗಳು ಇವೆ ಎಂದರೆ ಸರಿ. ಆದ್ದರಿಂದ ವಾಹನಗಳು ನಿಧಾನವಾಗಿ ಓಡಾಡುತ್ತವೆಂದರೆ ಸರಿಯಲ್ಲ. ಆ ದಿನ ಟೆಂಪೋ ಟ್ರಾಕ್ಸ ವಾಹನ ನಿಧಾನವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ, ವೇಗವಾಗಿ ಬರುತ್ತಿತ್ತು ಎಂದು ನುಡಿಯುತ್ತಾರೆ. ಆ ದಿನ ಟೆಂಪೋ ಟ್ರಾಕ್ಸ ವಾಹನ ಚಾಲಕ ವೇಗವಾಗಿ ನಡೆಸಿಕೊಂಡು ಬಂದ ಅಪಘಾತಪಡಿಸಿದ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಆ ದಿನ ಟೆಂಪೋ ಟ್ರಾಕ್ಸ ಚಾಲಕ ನಿಧಾನವಾಗಿ ಇಂಡಿಕೇಟರ್ ಹಾಕಿಕೊಂಡು ಹೋಗುತ್ತಿದ್ದ ನಾವೇ ಹೋಗಿ ಡಿಕ್ಕಿ ಪಡಿಸಿದ್ದೇವೆಂದರೆ ಸರಿಯಲ್ಲ.

2. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನಗೆ ಸರಿಯಾಗಿ ಮೋಟಾರ ಸೈಕಲ್ ಒಡಿಸಲು ಬರುತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಿಗೆ ಪತ್ರ ಇಲ್ಲ ಹಾಗೂ ನನ್ನ ವಾಹನಕ್ಕೆ ಇನ್ಸೂರೆನ್ಸ ಇದೆಯೋ ಇಲ್ಲವೋ ಗೊತ್ತಿಲ್ಲ. ನನಗೆ ಸರಿಯಾಗಿ ಗಾಡಿ ಓಡಿಸಲು ಬರುತ್ತಿರಲಿಲ್ಲ ಆದ್ದರಿಂದ ದೋಷಾರೋಪಣೆ ಪತ್ರದಲ್ಲಿ ಕಲಮ 181 ಎಮ್ ವಿ ಸಿ ಕಾಯಿದೆ ನಮೂದು ಮಾಡಿದ್ದಾರೆಂದರೆ ಸರಿಯಲ್ಲ. ನನ್ನದು ಬಲಗಾಲು ಮೊಣಕಾಲು ಕೆಳಗಡೆ ಮುರಿದು ಹೋಗಿದೆ ಆಪರೇಷನ್ ಮಾಡಿರುತ್ತಾರೆ. ಬಲಗಾಲಿನ ಕೆಳಗಡೆ ಮುರಿದಿದೆ ಎಮಬ

ವಿಷಯ ಸುಳ್ಳಿನಿಂದ ಕೂಡಿದೆ ನನಗೆ ಸಾದಾ ಸ್ವರೂಪದ ಗಾಯಗಳಾಗಿವೆ ಎಂದರೆ ಸರಿಯಲ್ಲ. ನಾನು ಓಡಿಸುತ್ತಿದ್ದ ಮೋಟಾರ್ ಸೈಕಲ್ ನನ್ನ ಸ್ನೇಹಿತನಾದ ಜಟ್ಟೆಪ್ಪನದು. ನನಗೆ ಮೊಟಾರ್ ಸೈಕಲ್ ನಂಬರ್ ಹೇಳಲು ಆಗುವುದಿಲ್ಲ.

3. ಮೊದಲು ಸರಕಾರಿ ಆಸ್ಪತ್ರೆಗೆ ಹೋಗಿದ್ದೇನೆ ನಂತರ ಶಾಂತಿ ಆಸ್ಪತ್ರೆ ಸಿಂಧನೂರಿಗೆ ಹೋಗಿದ್ದೇನೆ ಅಲ್ಲಿ ನನಗೆ ಆಪರೇಷನ್ ಮಾಡಿದ್ದಾರೆ. ಮಲ್ಲಿಕಾರ್ಜುನ ವೈದ್ಯರು ನನಗೆ ಆಪರೇಷನ್ ಮಾಡಿರುತ್ತಾರೆ. ನಾನು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಖಾಸತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಂತರ ನಾನು ಗಂಗಾವತಿ ಅನ್ನಪೂರ್ಣ ಆಸ್ಪತ್ರೆಯಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಕಾಲು ಆಪರೇಷನ್ ಆದಾಗಿನಿಂದ ಗಂಗಾವತಿ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ನಾನು ಗಂಗಾವತಿ ಆಸ್ಪತ್ರೆಯಲ್ಲಿ ತೋರಿಸಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ 10 ದಿನ ಇದ್ದೆ ದಿನಾಂಕ ಹೇಳಲು ಆಗುವುದಿಲ್ಲ, ಆಸ್ಪತ್ರೆಯಲ್ಲಿ 02 ಲಕ್ಷ ಖರ್ಚು ಆದ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೆನೆಂದರೆ ಸರಿಯಲ್ಲ. ಶಾಂತಿ ಆಸ್ಪತ್ರೆಯಿಂದ ಸಂಪುರ್ಣವಾಗಿ ಗುಣವಾದ ನಂತರ ಡಿಸ್ ಚಾರ್ಜ ಮಾಡಿದ್ದಾರೆಂದರೆ ಸರಿಯಲ್ಲ. ನನಗೆ ಈಗಲೂ ಕೂಡಾ ಮೆಟ್ಟಲು ಹತ್ತಲು ತೊಂದರೆ ಆಗುತ್ತದೆ. ನನಗೆ ಯಾವುದೆ ರೀತಿ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಡಿಸೆಬಲಿಟಿ ಸರ್ಟಿಫಿಕೇಟ್ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಡಿಸೆಬಿಲಿಟಿ ಸರ್ಟಿಫಿಕೇಟ್ ನ್ನು ಶಾಂತಿ ಆಸ್ಪತ್ರೆಯಿಂದ ಪಡೆದಿರುತ್ತೇನ. ಡಾಃ ಮಲ್ಲಿಕಾರ್ಜುನ ಅವರು ಡಿಸೆಬಲಿಟಿ ಸರ್ಟಿಪಿಕೇಟ್ ಕೊಟ್ಟಿರುತ್ತಾರೆ. ಶಾಂತಿ ಆಸ್ಪತ್ರೆಯಲ್ಲಿ ಗುಣಮುಖಳಾಗಿದ್ದೇನೆ, ಗಂಗಾವತಿ ಆಸ್ಪತ್ರೆಗೆ ಹೋಗಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆದಿರುತ್ತೆನೆಂದರೆ ಸರಿಯಲ್ಲ. ನನಗೆ ಯಾವುದೇ ರೀತಿ ಅಂಗನ್ಯೂನ್ಯತೆ ಆಗಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಡಾಕ್ಟ್ರ್ ಚೀಟಿ ಬರೆದುಕೊಟ್ಟ ನಂತರ ಔಷದಿ ತರುತ್ತೇವೆಂದರೆ ಸರಿ. ಎಕ್ಸರೇ ತೆಗೆದ ಬಗ್ಗೆ ರಿಪೋರ್ಟ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

4. ಈಗ ನನಗೆ ಸರಿಯಾಗಿ ಕಾಲು ಮಡಚಲು ಬರುವುದಿಲ್ಲ, ವಾಕ್ ಮಾಡಲು ಬರುವುದಿಲ್ಲ ಎಂಬ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಈಗ ನಾನು ಲಿಂಗಸೂಗೂರಿನಲ್ಲಿರುತ್ತೆನ. ಅದಕ್ಕೆ ಸಂಬಂಧಿಸಿದಂತೆ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿ. ನಾನು ಸುರಪುರ ತಾಲೂಕಿನ ಜಾಲಿಬೆಂಚಿನಲ್ಲಿರುತ್ತೇನೆ ಇಲ್ಲಿ ಬಂದು ಸುಳ್ಳು ಕೇಸ್ ಹಾಕಿದ್ದೇನೆಂದರೆ ಸರಿಯಲ್ಲ. ನನ್ನ ಅಲಕ್ಷತನದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಪರಿಹಾರ ಬರುತ್ತದೆ ಅಂತಾ ಸುಳ್ಳು ಕೇಸ್ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ

ಸರಿಯಲ್ಲ. ನನಗೆ ಆಸ್ಪತ್ರೆಯಲ್ಲಿ ಸಂಪೂರ್ಣ ಗುಣಮುಖನಾದ ನಂತರ ಡಿಸ್ ಚಾರ್ಜ ಮಾಡಿದ್ದಾರೆಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಕೂಲಿ ಕೆಲಸದಿಂದ ತಿಂಗಳಿಗೆ 15000/-ರೂ ಗಳಿಸುತ್ತಿದ್ದೇನೆಂಬ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಬೇರೆಯವರ ಜಮೀನುಗಳನ್ನು ಲೀಜ್ ಮಾಡಿ ತಿಂಗಳಿಗೆ 2,00,000/- ರೂಪಾಯಿ ಗಳಿಸುತ್ತಿದ್ದೆ ಎಂಬ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿಯ ಜಮೀನುಗಳು ಲೀಜ್ ಹಾಕಿಕೊಂಡಿಲ್ಲ, ನನಗೆ ಆದಾಯ ಇಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಪಹಣಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಪಾಟೀಸವಾಲು: 2 ನೇ ಎದರುದಾರರ ಪರ ವಕೀಲರು ಸಮಯವಕಾಸ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.
**ಸಹಿ/-**
**( ಚಂದ್ರಶೇಖರ ಪಿ. ದಿಡ್ಡಿ )**
ಹಿರಿಯ ಸಿವಿಲ್ ನ್ಯಾಯಾಧೀಶರು,
**ಲಿಂಗಸೂಗುರು.**